**ಸಿ.ಸಿ.ನಂ.1687/2019**
**ಡಿ.ಬ್ಲ್ಯೂ.1**

**ದಿನಾಂಕಃ 30-07-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು**

**<u>ಪಾಟೀ ಸವಾಲುಃ ಪಿರ್ಯಾದಿ ಪರ ಶ್ರೀ ಸಿ.ವಿ.ಎಸ್. ವಕೀಲರಿಂದ ಃ</u>**

ನಾನು ವ್ಯವಸಾಯ ಮಾಡಿಕೊಂಡಿರುತ್ತೇನೆ. ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಉದ್ಯಮ ಮಾಡಿಕೊಂಡಿರುತ್ತೇನೆ ಬರೆಸಿರುತ್ತೇನೆ ಎಂದರೆ ಸರಿ. ಪಿರ್ಯಾದಿಯು ಏನು ಕೆಲಸ ಮಾಡಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಪಿರ್ಯಾದುದಾರರು ನನಗೆ ಅಥವಾ ಇನ್ಯಾರಿಗೂ ರೂ.2,00,000/- ಹಣವನ್ನು ಸಾಲವಾಗಿ ನೀಡಲು ಸಾಮರ್ಥ್ಯ ಇಲ್ಲ ಎಂದು  ಬರೆಸಿರುತ್ತೇನೆ ಎಂದರೆ ಸರಿ. ನಾನು ಈ ರೀತಿ ಬರೆಸಿರುವುದರಿಂದ ನನಗೆ ಪಿರ್ಯಾದುದಾರರ ಪರಿಚಯ ಇತ್ತು ಎಂದರೆ ಸರಿಯಲ್ಲ. ಆ ರೀತಿ ನನ್ನ ವಕೀಲರು ಬರೆಸಿರುತ್ತಾರೆ. ನಾನು ಫಿರ್ಯಾದುದಾರರ ವಿರುದ್ಧ 2019 ರಿಂದ ಯಾವುದೇ ಪ್ರಕರಣ ದಾಖಲಿಸಿರುವುದಿಲ್ಲ. ನನಗೆ ಫಿರ್ಯಾದಿಯ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ.

ನಿಪಿ.1 ರ ಸಹಿ ನನ್ನದೇ ಆಗಿರುತ್ತದೆ ಹಾಗೂ ನಿಪಿ.1 ರ ಚೆಕ್ ನನ್ನ ಖಾತೆಗೆ ಸಂಬಂದಪಟ್ಟಿರುತ್ತದೆ. ಸದರಿ ಚೆಕ್ ನ್ನು ಬ್ಯಾಂಕಿಗೆ ಹಾಜರು ಪಡಿಸಿದಾಗ ನನಗೆ ಎಸ್.ಎಂ.ಎಸ್ ಬರುತ್ತದೆ ಎಂದರೆ ಸರಿಯಲ್ಲ. ದಿಃ 25-06-2018 ರಿಂದ ಇವತ್ತಿನವರೆಗೂ ನಿಪಿ.1 ರ ಚೆಕ್ ಏನಾಯಿತು ಎಂದು ನೀವು ಕ್ರಮ ತೆಗೆದುಕೊಂಡಿರುತ್ತೀರಾ ಎಂದರೆ ಸಾಕ್ಷಿ ಅದು ತುಂಬಾ ಹಳೆಯ ಚೆಕ್ ಆಗಿರುವುದರಿಂದ ನಾನು ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿರುತ್ತದೆ. ನಾನು ನಿಪಿ.1 ರ ಚೆಕ್ ನ್ನು ನಾಗರಾಜುರವರಿಗೆ ನೀಡಿರುವ ಬಗ್ಗೆ ಏನು ದಾಖಲೆ ಇದೆ ಎಂದರೆ ಯಾವುದೇ ದಾಖಲೆ ಇಲ್ಲ ಎಂದು ನುಡಿಯುತ್ತಾರೆ.

ನಿಡಿ.1 ರ ದಾಖಲೆಯನ್ನು ಚಿಕ್ಕಮಗಳೂರು ನ್ಯಾಯಾಲಯದಿಂದ ಪಡೆದುಕೊಂಡಿರುತ್ತೇನೆ. ನಿಡಿ.1 ರಲ್ಲಿ ಇರುವ ಪ್ರಕರಣದಲ್ಲಿ ಈ ಪ್ರಕರಣದ ನಿಸಿ.1

ಚೆಕ್ ನ್ನು ನಾಗರಾಜುರವರಿಗೆ ನೀಡಿರುವ ಬಗ್ಗೆ ನಾನಗಲೀ ಅಥವಾ ನನ್ನ ತಂದೆಯಾಗಲೀ ಹೇಳಿರುವುದಿಲ್ಲ ಎಂದರೆ ಸರಿ. ನಿಪಿ.1 ರ ಚೆಕ್ ನ್ನು ನಾಗರಾಜುರವರು ದುರುಪಯೋಗ ಪಡಿಸಿಕೊಂಡಿರುವ ಬಗ್ಗೆ ಅವರ ವಿರುದ್ಧ ಏನು ಕ್ರಮ ಕೈಗೊಂಡಿರುತ್ತೀರಾ ಎಂಬ ಪ್ರಶ್ನೆಗೆ ಸದರಿ ನಾಗರಾಜುರವರಿಗೆ ಸುಮಾರು 10-15 ವರ್ಷಗಳ ಹಿಂದೆ 4 ಚೆಕ್ ಗಳನ್ನು ನೀಡಿರುತ್ತೇನೆ ಅವರ ವಿರುದ್ಧ ಕ್ರಿಮಿನಲ್ ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದು ನುಡಿಯುತ್ತಾರೆ.

2017 ರಲ್ಲಿ ನಾಗರಾಜುರವರ ವಿರುದ್ಧ ಕ್ರಿಮಿನಲ್ ಪ್ರಕರಣವನ್ನು ದಾಖಲಿಸಿರುತ್ತೇನೆ. ಸದರಿ ಪ್ರಕರಣವು ನ್ಯಾಯಾಲಯದಲ್ಲಿ ಈಗ ವಿಚಾರಣೆಯ ಹಂತದಲ್ಲಿರುತ್ತದೆ. ಸದರಿ ಪ್ರಕರಣದಲ್ಲಿ ನಿಪಿ.1 ರ ಚೆಕ್ ನ್ನು ಪೊಲೀಸರು ವಶಪಡಿಸಿಕೊಂಡಿರುವುದಿಲ್ಲ ಎಂದರೆ ಸರಿ. ನಾನು ನಾಗರಾಜುರವರ ವಿರುದ್ಧ ನೀಡಿರುವ ಪ್ರಕರಣದಲ್ಲಿ ಸಾಕ್ಷಿದಾರರಾಗಿರುತ್ತೇನೆ. ನಾನು ನಿಪಿ.1 ರ ಚೆಕ್ ನ್ನು ನಾಗರಾಜುರವರಿಗೆ ನೀಡಿರುವ ಬಗ್ಗೆ ಸದರಿ ಕ್ರಿಮಿನಲ್ ಪ್ರಕರಣದಲ್ಲಿ ಹೇಳಿಕೆಯನ್ನು ನೀಡಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಈ ಚೆಕ್ ನ ಸಂಖ್ಯೆ ಗೊತ್ತಿಲ್ಲದ ಕಾರಣ ಚೆಕ್ ನ್ನು ನೀಡಿರುತ್ತೇನೆ ಎಂದು ಹೇಳಿರುತ್ತೇನೆ.

ಪಿರ್ಯಾದು ಶೀರ್ಷಿಕೆಯಲ್ಲಿರುವ ವಿಳಾಸವು ನನ್ನದೇ ಆಗಿರುತ್ತದೆ. ನಿಸಿ.5 ನ್ನು ನಾನು ಸ್ವೀಕರಿಸಲು ನಿರಾಕರಿಸಿರುತ್ತೇನೆ ಎಂದು ಬರೆದಿರುತ್ತದೆ ಎಂದರೆ ಸಾಕ್ಷಿಯು ಪೋಸ್ಟಮನ್ ಆ ರೀತಿ ಬರೆದು ಕಳುಹಿಸಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಪಿರ್ಯಾದಿಯ ಬಗ್ಗೆ ನನ್ನ ವಕೀಲರಿಗೆ ಮಾಹಿತಿಯನ್ನು ನೀಡಿರುವುದಿಲ್ಲ. ನಾನು ಫಿರ್ಯಾದಿಯ ಅಂಗಡಿಗೆ ಹೋಗಿ ಮೊಬೈಲ್ ರಿಚಾರ್ಜ್ ಮಾಡಿಸುತ್ತಿದ್ದ ಕಾರಣ ನನಗೂ ಮತ್ತು ಫಿರ್ಯಾದಿಗೆ ಪರಿಚಯ ಇತ್ತು ಎಂದರೆ ಸರಿಯಲ್ಲ. ನಾನು ಈ ಹಿಂದೆ ತರಕಾರಿ ವ್ಯಾಪಾರ ಮಾಡುತ್ತಿದ್ದೆ.

ದಿಃ 20-06-2018 ರಂದು ನಾನು ಫಿರ್ಯಾದಿಯಿಂದ ರೂ.2,00,000/- ಹಣವನ್ನು ಸಾಲವಾಗಿ ಪಡೆದುಕೊಂಡು ಅದೇ ದಿನ ನಿಪಿ.1 ಚೆಕ್ ನ್ನು ದಿಃ 25-06-2018 ಎಂದು ದಿನಾಂಕವನ್ನು ನಮೂದಿಸಿ ಫಿರ್ಯಾದಿಗೆ ನೀಡಿರುತ್ತೇನೆ

**ಸಿ.ಸಿ.ನಂ.1687/2019**
**ಡಿ.ಬ್ಲ್ಯೂ.1**

ಎಂದರೆ ಸರಿಯಲ್ಲ. ನನಗೆ ನಾಗರಾಜುರವರನ್ನು ನ್ಯಾಯಾಲಯಕ್ಕೆ ಕರೆಸಿ ಸಾಕ್ಷಿ ವಿಚಾರಣೆ ಮಾಡಿಸಲು ಯಾವುದೇ ತೊಂದರೆ ಇಲ್ಲ ಎಂದರೆ ಸರಿ. ನಾನು ಫಿರ್ಯಾದಿಯಿಂದ ಪಡೆದುಕೊಂಡಿರುವ ಸಾಲವನ್ನು ಮರುಪಾವತಿಸಬೇಕಾಗಿರುವ ಕಾರಣ ನಿಪಿ.1 ರ ಚೆಕ್ ನ್ನು 15 ವರ್ಷಗಳ ಹಿಂದೆ ನಾಗರಾಜುರವರಿಗೆ ನೀಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಫಿರ್ಯಾದಿಗೆ ಚೆಕ್ ನೀಡಿರುವುದು, ಸದರಿ ಚೆಕ್ ನನ್ನ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂಬ ಕಾರಣದಿಂದ ಅಮಾನ್ಯಗೊಂಡಿರುವುದು ಹಾಗೂ ಫಿರ್ಯಾದಿಯು ನನಗೆ ಕಾನೂನು ತಿಳುವಳಿಕೆ ಪತ್ರವನ್ನು ಕಳುಹಿಸಿರುವುದು, ಈ ಎಲ್ಲಾ ವಿಷಯಗಳ ಬಗ್ಗೆ ನನಗೆ ಪೂರ್ಣ ಮಾಹಿತಿ ಇದೆ ಎಂದರೆ ಸರಿಯಲ್ಲ. ನನ್ನ ವಿರುದ್ಧ ಚಿಕ್ಕಮಗಳೂರು ನ್ಯಾಯಾಲಯದಲ್ಲಿ ಚೆಕ್ ಅಮಾನ್ಯ ಪ್ರಕರಣ ಹಾಗೂ ಜಮೀನಿನ ಕರಾರಿಗೆ ಸಂಬಂಧಿಸಿದ ದಾವೆಯು ನಡೆಯುತ್ತಿತ್ತು ಎಂದರೆ ಸರಿ. ನಾನು ಈ ಫಿರ್ಯಾದಿಯನ್ನು ಹೊರತು ಪಡಿಸಿ ಇತರೆ ವ್ಯಕ್ತಿಗಳಿಂದಲೂ ಸಾಲವನ್ನು ಪಡೆದುಕೊಂಡಿರುವ ಸಂಬಂಧ ಪ್ರಕರಣಗಳು ನಡೆಯುತ್ತಿದೆ ಎಂದರೆ ಸರಿಯಲ್ಲ. ನಾನು ಹಲವಾರು ವ್ಯಕ್ತಿಗಳಿಂದ ಸಾಲವನ್ನು ಪಡೆದು ಅವರುಗಳಿಗೆ ಚೆಕ್ ನ್ನು ನೀಡಿ ಮೋಸ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಫಿರ್ಯಾದಿಯು ಪರಿಚಯ ಇದ್ದರು ಸಹ ಅವರ ಪರಿಚಯ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ಫಿರ್ಯಾದಿ ಸ್ನೇಹಿತರು ಮತ್ತು ನಮ್ಮ ನಡುವೆ ಹಣಕಾಸಿನ ವ್ಯವಹಾರ ನಡೆಯುತ್ತಿತ್ತು ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u> ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

Sd/-
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.